ಮಧುರಾ ಕರ್ಣಮ್

# ಪರಂಪರಾನುಗತ

“ನಮ್ಮ ದತ್ತಪ್ಪ ಬರೇ ಮೂರ್ತೆಲ್ಲ, ನಮ್ಮ ನಂಬಿಕಿ, ಅಖಂಡ ವಿಶ್ವಾಸದ ಜೋಡಿ ಜೀವಾ... ನ ಅವನೊಳಗ ತುಂಬೇದ. ಎಲ್ಲಾ ‘ಬಿಟ್ಟ ಬಿಡ್ರಿ, ಕೊಟ್ಟ ಬಿಡ್ರಿ’ ಅಂದ್ರ ಬದಕೋದು ಹ್ಯಾಂಗ?” ಎಂದು ಶ್ರೀಪಾದರು ಗಂಭೀರ ಮುಖಮುದ್ರೆಯಿಂದ ಹೆಂಡತಿಗೆ ಕೇಳಿದರು. “ಅದನ್ನ ಮಗಳಿಗೆ ಕೇಳ್ರಿ. ಅಕಿದ ಫೋನು” ಎಂದು ಕೈಯಲ್ಲಿ ಕೊಟ್ಟರು ವೇದಾ. ಅಳುಕುತ್ತಲೇ ಹಿಡಿದವರಿಗೆ ಅತ್ತಲಿಂದ, “ಅಪ್ಪಾ, ಈ ಸಲಾರೇ ದೇವರ ಬಗ್ಗೆ ಒಂದು ನಿರ್ಧಾರ ತೊಗೊರಿ. ನಿಮಗೂ ವಯಸ್ಸಾಗೇದ. ಆಗೂದಿಲ್ಲ. ಅಮ್ಮಾಗಂತೂ ಮದ್ಲ ಆಗವಲ್ತು. ಅಕಿಗೆ ಯಾಕ ತ್ರಾಸು ಕೊಡ್ತೀರಿ?” ಎನ್ನುವ ನುಡಿಗಳು ಹಿರಿ ಮಗಳು ಸುನಿತಾಳಿಂದ ಕೇಳಿ ಬಂದಿತ್ತು. ಶ್ರೀಪಾದರು ಹುಬ್ಬು ಗಂಟಿಕ್ಕಿದರೂ, “ಹಂಗ ಆಗ್ಲೀ ಸುನಿ. ಈ ಸರೆ ಏನರೆ ವಿಚಾರ ಮಾಡ್ತೀವಿ. ನೀನ ನೋಡೀಯಲಾ... ತಲಿತಲಾಂತರದಿಂದ ನಮ್ಮ ಅಜ್ಜ, ಮುತ್ತಜ್ಜ ಎಲ್ಲಾರೂ ಪೂಜಾ ಮಾಡಿದ ದೇವರು ದತ್ತಪ್ಪ ‘ವಿಲೇವಾರಿ ಮಾಡ್ರಿ’ ಅಂದ್ರ ಹೆಂಗ ಮಾಡೋದು? ಏನ ರದ್ದೀನ? ಹಳೇ ಸಾಮಾನ?... ನಮ್ಮ ಭಕ್ತಿಗೆ ಭಂಗ ಬರದ್ಹಾಂಗ...” ಎನ್ನುತ್ತಿದ್ದ ತಂದೆಯ ವಾಕ್ಯವನ್ನು ತುಂಡರಿಸಿದ ಸುನಿತಾ, “ಅದಕ್ಕ ನಿಮ್ಮನ್ನ ಹಳೇ ಮಂದಿ ಅನ್ನೋದು. ದಿನಾ ದತ್ತಪ್ಪನ್ನ ಲಕ್ಷಾಂತರ ಮಂದಿ ಪೂಜಾ ಮಾಡ್ತಾರ. ನೀವಿಬ್ಬರೂ ಮಾಡದಿದ್ರ ಭಾಳ ಫರಕೇನೂ ಬೀಳೂದಿಲ್ಲ. ಓ.ಎಮ್.ಜಿ. ಸಿನಿಮಾದಾಗ ಹೇಳೋಹಂಗ ನೀವೆಲ್ಲಾ ಖರೇ ಭಕ್ತರಲ್ಲ. ದೈವಭೀತಿ, ಪಾಪಭೀತಿ ಇರಾವ್ರು. ಗಾಡ್ ಫಿಯರಿಂಗ್ ಅಂದರ ದೇವರಿಗೆ ಅಂಜೋ ಮಂದಿ. ಪೂಜಾ ಬಿಟ್ಟರ ಏನಾಗ್ತದೋ ಅಂತ ಹೆದರತೀರಿ. ಒದ್ದ್ಯಾಡಕೋತ ಯಾಕ ಮಾಡಬೇಕು? ‘ಇಷ್ಟ ದಿವ್ಸ ಮಾಡೇನಪಾ. ಈಗ ಆಗವಲ್ತು’ ಅನ್ನೋದು. ಯಾವ್ದರೆ ಗಿಡದ ಬುಡಕ ಇಟ್ಟ ಕೈ ಮುಗದು ಬರೋದು. ದೇವರು ಅವ್ರು. ರಾಕ್ಷಸರಲ್ಲ. ನೀವು ಪೂಜಾ ಮಾಡ್ಲಿಲ್ಲಂತೇನು ಬಂದು ನಿಮ್ಮ ಕುತ್ತಿಗಿ ಕೊಯ್ಯುದಿಲ್ಲ...” ಎನ್ನುವ ವಾಕ್‌ಪ್ರವಾಹವನ್ನು ತಾಳಲಾಗದೇ ಶ್ರೀಪಾದರು, “ಹ್ಞೂಂ. ಖರೇನ ಈ ಸಲಾ ಏನರ ಘಟ್ಟಿ ಮಾಡಕೊಂಡ ನಿನಕಡೆ ಬರ್ತೇವಿ” ಎಂದು ಮಡದಿಯ ಕೈಗೆ ಕೊಟ್ಟು ಪಾರಾದರು.

ಹೀಗೆ ಒಮ್ಮೆಲೆ ಹೇಳಿದರೆ ನಿಮಗೆ ಅರ್ಥವಾಗುವದಿಲ್ಲ. ಕೊಂಚ ಹಿನ್ನೆಲೆಯೊಂದಿಗೆ ನಿಧಾನವಾಗಿ ವಿವರಿಸಬೇಕು. ನೀವು ‘ಗದಗ’ ಎಂಬ ಊರಿನ ಹೆಸರು ಕೇಳಿರಬಹುದು. ವೀರನಾರಾಯಣನ ದೇವಸ್ಥಾನ, ತೋಂಟದಾರ್ಯ ಮಠಗಳು ಇಲ್ಲಿನ ಪ್ರಸಿದ್ಧ ತಾಣಗಳು. ಪುಸ್ತಕಗಳಿಗೆ, ಪ್ರಕಾಶಕರಿಗೆ, ಹತ್ತಿ ವ್ಯಾಪಾರಕ್ಕೆಲ್ಲ ಹೆಸರಾದ ಸ್ಥಳ. ವೀರನಾರಾಯಣನ ದೇವಸ್ಥಾನದ ಮುಂಭಾಗದಲ್ಲಿ ಎರಡನೇ ಬೀದಿಯಲ್ಲಿ ನಾಲ್ಕನೇ ಮನೆ ಶ್ರೀಪಾದ ರಾವ್ ಶಿರಹಟ್ಟಿಯವರದು. ಅವರ ತಾತ, ಮುತ್ತಾತಂದಿರು ಶಿರಹಟ್ಟಿಯಲ್ಲೇ ನೆಲೆಸಿದ್ದರಿಂದ ಈ ಅಡ್ಡಹೆಸರು ಬಂದಿರಲಿಕ್ಕೂ ಸಾಕು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರೀಪಾದರ ತಂದೆ ಮಾರ್ತಾಂಡ ಭಟ್ಟರು ಅಂದಿನ ದಿನಗಳಲ್ಲಿ ಮೂರು ಸಾವಿರ ರೂಪಾಯಿಗಳಿಗೆ ಈ ಮನೆ ಖರೀದಿಸಿ ವಾಸ್ತವ್ಯ ಹೂಡಿದರು. ಅವರು ವೇದವಿದ್ಯಾ ಪಾರಂಗತರಾಗಿದ್ದರೂ ಸರ್ಕಾರಿ ನೌಕರಿ ದೊರಕಿದ್ದರಿಂದ